2019 ಕ.ತೀ.ವ 775

(ಧಾರವಾಡ ಪೀಠ)

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್

## ನ್ಯೂ ಇಂಡಿಯಾ ಆಶ್ಯೂರೆನ್ಸ್ ಕಂಪನಿ, ನಿಯಮಿತ –ವಿರುದ್ಧ– ಸಿ. ಮಲ್ಲಿಕಾರ್ಜುನ ಮತ್ತು ಇನ್ನೊಬ್ಬರು*

ಕಾರ್ಮಿಕ ನಷ್ಟ ಪರಿಹಾರ ಅಧಿನಿಯಮ, 1923ರ 10ನೇ ಪ್ರಕರಣ.

ನಿಯೋಜಕನ ಕೆಲಸದಲ್ಲಿ ನಿರತನಾಗಿರುವಾಗ ಅಪಘಾತಕ್ಕೊಳಗಾದ ಚಾಲಕನಿಗೆ ಆತನು ಹಾಜರುಪಡಿಸಿದ ದಾಖಲೆಗಳ ಆಧಾರದ ಮೇಲೆ ಕಾರ್ಮಿಕ ಆಯುಕ್ತರು ನೀಡಿದ ನಷ್ಟ ಪರಿಹಾರವನ್ನು ಪ್ರಶ್ನಿಸಿ ವಿಮಾ ಕಂಪನಿಯಿಂದ ಪ್ರಸ್ತುತ ಅಪೀಲನ್ನು ಸಲ್ಲಿಸಲಾಗಿದೆ.

ಕ್ಲೇಮುದಾರ – ಕೆಲಸಗಾರನು, ತನ್ನ ಕ್ಲೇಮು ಅರ್ಜಿಯ ಸಮರ್ಥನೆಯಲ್ಲಿ, ಅಫೀಡಾವಿಟ್‌ನೊಂದಿಗೆ ಪ್ರಥಮ ಮಾಹಿತಿ ವರದಿ, ಸ್ಥಳ ಮಹಜರು, ಆರೋಪ ಪಟ್ಟಿ, ಐವಿಎಂ ವರದಿ, ಗಾಯದ ಪ್ರಮಾಣಪತ್ರ, ವಾಹನ ಚಾಲನಾ ಪರವಾನಗಿ ಹಾಗೂ ಅಸಮರ್ಥತೆಯ ಪ್ರಮಾಣಪತ್ರಗಳನ್ನು ಸಾಕ್ಷ್ಯಗಳೆಂದು ಸಲ್ಲಿಸಿರುವುದನ್ನು ಅನುಕ್ರಮವಾಗಿ ನಿಶಾನೆ ಪಿ.1 ರಿಂದ ಪಿ.7 ಎಂದು ಗುರುತಿಸಲಾಗಿದೆ. ಎರಡನೇ ಪ್ರತ್ಯರ್ಜಿದಾರ – ವಿಮಾಕರ್ತನ ಪರವಾಗಿ ವಿಮಾ ಪಾಲಿಸಿಯನ್ನು ಹೊರತುಪಡಿಸಿ ಯಾವುದೇ ಸಾಕ್ಷ್ಯಗಳನ್ನು ಹಾಜರುಪಡಿಸಿರುವುದಿಲ್ಲ.

ಇಬ್ಬರು ಪಕ್ಷಕಾರರ ವಾದಗಳ ಆಧಾರದ ಮೇಲೆ, ಆಯುಕ್ತರು, 5 ವಿವಾದಾಂಶಗಳನ್ನು ರೂಪಿಸಿದ್ದಾರೆ ಮತ್ತು ಮೌಖಿಕ ಹಾಗೂ ಲಿಖಿತ ದಸ್ತಾವೇಜೀಯ ಸಾಕ್ಷ್ಯಗಳ ವಿಶ್ಲೇಷಣೆಯನ್ನಾಧರಿಸಿ, ಕೆಲಸಗಾರನಿಗೆ ಆತನು ಕಾರ್ಯನಿರ್ವಹಿಸುವ ವೇಳೆಯಲ್ಲಿ

*ಎಂಎಫ್‌ಎ ಸಂಖ್ಯೆ: 2329/2009 (ಡಬ್ಲ್ಯೂಸಿ), ದಿನಾಂಕ 20ನೇ ಜೂನ್, 2017.

ಗಾಯಗಳುಂಟಾಗಿರುವುದರಿಂದ, ಕ್ಲೇಮು ಅರ್ಜಿಯನ್ನು ಪುರಸ್ಕರಿಸಿ, ತೀರ್ಪು ನೀಡಿದ ದಿನಾಂಕದಿಂದ 51,667/– ರೂ.ಗಳ ನಷ್ಟ ಪರಿಹಾರವನ್ನು ಶೇ.12ರ ಬಡ್ಡಿ ಸಹಿತ ನೀಡಲು ಐತೀರ್ಪು ನೀಡಿದ್ದಾರೆ. ಈ ಐತೀರ್ಪಿನ ವಿರುದ್ಧ ವಿಮಾಕರ್ತನು ಕ್ಲೇಮು ಅರ್ಜಿಯನ್ನು ಸಲ್ಲಿಸಿರುವನು.

ದಾಖಲೆಯಲ್ಲಿನ ಸಾಕ್ಷ್ಯಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದ ನಂತರ, ಆಯುಕ್ತರ ಮುಂದೆ ವಿಚಾರಣೆ ನಡೆಯುತ್ತಿರುವಾಗ, ಕೆಲಸಗಾರನು ನಿಯೋಜಕ – ನಿಯೋಜಿತನ ನ್ಯಾಯಿಕ ಸಂಬಂಧವನ್ನು ಮತ್ತು ಆತನಿಗೆ ಉದ್ಯೋಗಾವಧಿಯಲ್ಲಿ ಗಾಯವಾಗಿದೆ ಎಂಬುದನ್ನು ನಿರೂಪಿಸಿರುವುದು ಕಂಡುಬರುತ್ತದೆ. ನಿಶಾನೆ ಪಿ.7 ರಲ್ಲಿರುವ ಅಸಮರ್ಥತೆ ಪ್ರಮಾಣಪತ್ರ ನೀಡಿದ ವೈದ್ಯನು ಕೀಲು–ಮೂಳೆ ವಿಷಯ ಕ್ಷೇತ್ರದಲ್ಲಿ ತಜ್ಞನಲ್ಲವಾದರೂ, ಅದನ್ನು ಕ್ಷ–ಕಿರಣ (ಎಕ್ಸ್–ರೇ) ವರದಿಯ ಆಧಾರದ ಮೇಲೆ ನೀಡಿದ್ದಾರೆ ಮತ್ತು ಅವರು ಶೇ.10ರಷ್ಟು ಶಾಶ್ವತ ದೈಹಿಕ/ಕಾರ್ಯಾತ್ಮಕ ಅಸಮರ್ಥತತೆ ಉಂಟಾಗಿದೆಯೆಂದು ನಿರ್ಧರಿಸಿದ್ದಾರೆ. ಶಾಸನಬದ್ಧ ಪ್ರಾಧಿಕಾರವು ಕೆಲಸಗಾರನಿಗೆ ನೀಡಿದ ವಾಹನ ಚಾಲನಾ ಪರವಾನಗಿ ನಿಶಾನೆ. ಪಿ.6 ಇದರ ಪರಿಶೀಲನೆಯಿಂದ ತಿಳಿದುಬಂದಂತೆ, ಅಪಘಾತ ನಡೆದ ದಿನಾಂಕದಂದು ಕೆಲಸಗಾರನಿಗೆ 26 ವರ್ಷ ವಯಸ್ಸಾಗಿತ್ತು ಹಾಗೂ ಅಪಘಾತವಾದ ವರ್ಷ 2005 ಆಗಿದೆ ಮತ್ತು ಆಯುಕ್ತರು ಆತನ ಮಾಸಿಕ ಸಂಬಳವನ್ನು 4000/– ರೂ.ಗಳು ಎಂಬುದಾಗಿ ತೆಗೆದುಕೊಂಡಿದ್ದು, 215.28ರ ಸುಸಂಬದ್ಧ ಗುಣಾಂಕವನ್ನು ಅನ್ವಯಿಸಿ, ಆಯುಕ್ತರು 51,667/– ರೂ.ಗಳ ಸೂಕ್ತವಾದ ನಷ್ಟ ಪರಿಹಾರವನ್ನು ನಿರ್ಧರಿಸಿದ್ದಾರೆ.

ಅಪೀಲಿನಲ್ಲಿ ಯಾವುದೇ ಗುಣಾರ್ಹತೆ ಇಲ್ಲದಿರುವುದರಿಂದ ಅಪೀಲನ್ನು ವಜಾಗೊಳಿಸಿದೆ.

*ಉಲ್ಲೇಖಿಸಲಾದ ಮೊಕದ್ದಮೆ* *ಪ್ಯಾರಾದಲ್ಲಿ*

1. *(2017) 1 ಎಸ್‌ಸಿಸಿ 45*
   *ಗೊಲ್ಲ ರಾಜಣ್ಣ ಮತ್ತು ಇತರರು –ವಿರುದ್ಧ–*
   *ವಿಭಾಗೀಯ ವ್ಯವಸ್ಥಾಪಕರು ಮತ್ತು ಇನ್ನೊಬ್ಬರು (ಉಲ್ಲೇ) 7*

ಅರ್ಜಿದಾರರ ಪರ : ಶ್ರೀಮತಿ ಅರುಣ ಆರ್. ದೇಶಪಾಂಡೆ, ವಕೀಲರು.
ಪ್ರತ್ಯರ್ಜಿದಾರರ ಪರ : ಶ್ರೀ ವೈ. ಲಕ್ಷ್ಮಿಕಾಂತ ರೆಡ್ಡಿ, ವಕೀಲರು.

## ತೀರ್ಪು

**ನ್ಯಾಯಮೂರ್ತಿ ಕೆ. ಸೋಮಶೇಖರ್**:

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ ಆಯುಕ್ತರು ಎಂದು ಉಲ್ಲೇಖಿಸಲಾಗುವುದು.) ಇವರ ಮುಂದಿನ ಕಡತ ಸಂಖ್ಯೆ ಡಬ್ಲ್ಯೂಸಿಎ. ಸಂ. 46/2006ರಲ್ಲಿನ ಪ್ರತ್ಯರ್ಜಿದಾರ ಸಂಖ್ಯೆ 2 ವಿಮಾಕರ್ತನು, ಮಾನ್ಯ ಆಯುಕ್ತರು ದಿನಾಂಕ: 29.12.2008ರಲ್ಲಿ ಹೊರಡಿಸಿದ ತೀರ್ಪು ಹಾಗೂ ಐತೀರ್ಪನ್ನು ಪ್ರಶ್ನಿಸಿ ಈ ಅಪೀಲನ್ನು ಸಲ್ಲಿಸಿದ್ದಾರೆ.

2. ಮೊಕದ್ದಮೆಯ ಸಂಗತಿಗಳು ಈ ಮುಂದಿನಂತಿವೆ:

ಸಿ. ಮಲ್ಲಿಕಾರ್ಜುನ ಎಂಬ ಹೆಸರಿನ ಗಾಯಾಳು–ಕ್ಲೇಮುದಾರನು (ಇದರಲ್ಲಿ ಇನ್ನು ಮುಂದೆ 'ಕೆಲಸಗಾರನೆಂದು' ಉಲ್ಲೇಖಿಸಲಾಗುವುದು), ಪ್ರತ್ಯರ್ಜಿದಾರ ಸಂಖ್ಯೆ.1 ಇವರಿಗೆ ಸೇರಿದ ಎಂಎಚ್–03–ಆರ್–7950 ಸಂಖ್ಯೆಯ ಆಟೋರಿಕ್ಷಾದ ಚಾಲಕನಾಗಿ ಕಾರ್ಯನಿರ್ವಹಿಸುತ್ತಿದ್ದು, ದಿನಾಂಕ: 23.07.2005ರಂದು, ರೈಲ್ವೆ ನಿಲ್ದಾಣದ ಬಳಿಯ ಸುಧಾ ಕ್ರಾಸ್ ತಲುಪುತ್ತಿದ್ದಂತೆ ವಾಹನವು ಆತನ ನಿಯಂತ್ರಣ ಮೀರಿ, ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದ ಪರಿಣಾಮವಾಗಿ ಆತನ ಬಲಗಾಲು ಮತ್ತು ಬಲಗೈಗೆ ತೀವ್ರ ರೀತಿಯ ಗಾಯಗಳುಂಟಾದವು. ಆತನು ಸುಮಾರು 10 ದಿನಗಳ ಕಾಲ ವಿಮ್ಸ್ ಆಸ್ಪತ್ರೆ, ಬಳ್ಳಾರಿ ಇಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾನೆ. ಕ್ಲೇಮು ಅರ್ಜಿಯಲ್ಲಿ ದೃಢವಾಗಿ ತಿಳಿಸಿದಂತೆ, ಅಪಘಾತದ ಸಂದರ್ಭದಲ್ಲಿ ಆತನಿಗೆ ಮಾಸಿಕ 4000/– ರೂ.ಗಳಂತೆ ಸಂಬಳ ಹಾಗೂ ಇದರೊಂದಿಗೆ ದೈನಂದಿನ ಬಾಟಾ ಆಗಿ 50/– ರೂ.ಗಳನ್ನು ನೀಡಲಾಗುತ್ತಿತ್ತು. ಕೆಲಸ ನಿರ್ವಹಿಸುತ್ತಿದ್ದಾಗ

ಆತನಿಗೆ ಗಾಯಗಳುಂಟಾಗಿರುವುದರಿಂದ, ಕಾರ್ಮಿಕ ನಷ್ಟ ಪರಿಹಾರ ಅಧಿನಿಯಮದ 10ನೇ ಪ್ರಕರಣದ ಮೇರೆಗೆ ಆಟೋರಿಕ್ಷಾದ ಮಾಲೀಕ ಹಾಗೂ ವಿಮಾಕರ್ತನಿಂದ 4,00,000/– ರೂಪಾಯಿಗಳ ಪರಿಹಾರವನ್ನು ಕೋರಿ ಆತನು ಕ್ಲೇಮು ಅರ್ಜಿಯನ್ನು ಸಲ್ಲಿಸಿದ್ದಾನೆ.

3. ನೋಟಿಸ್‌ಅನ್ನು ಜಾರಿಗೊಳಿಸಿದ ತರುವಾಯ, ಎರಡನೇ ಪ್ರತ್ಯರ್ಜಿದಾರ – ವಿಮಾಕರ್ತನು, ಆಕ್ಷೇಪಣಾ ಹೇಳಿಕೆಗಳನ್ನು ಸಲ್ಲಿಸಿದ್ದಾನೆ ಮತ್ತು ಕ್ಲೇಮು ಅರ್ಜಿಯನ್ನು ಪ್ರಶ್ನಿಸಿದ್ದಾನೆ. ನೋಟೀಸನ್ನು ನೀಡಿದ ತರುವಾಯವೂ, ಮೊದಲನೇ ಪ್ರತ್ಯರ್ಜಿದಾರ–ವಾಹನ ಮಾಲೀಕನು ಪ್ರತಿನಿಧಿಸಿಲ್ಲವಾದ್ದರಿಂದ, ಆತನನ್ನು ಆಯುಕ್ತರ ಮುಂದೆ ಏಕಪಕ್ಷೀಯವಾಗಿ ಇರಿಸಲಾಗಿದೆ.

4. ಕ್ಲೇಮುದಾರ – ಕೆಲಸಗಾರನು, ತನ್ನ ಕ್ಲೇಮು ಅರ್ಜಿಯ ಸಮರ್ಥನೆಯಲ್ಲಿ, ಅಫೀಡಾವಿಟ್‌ನೊಂದಿಗೆ ಪ್ರಥಮ ಮಾಹಿತಿ ವರದಿ, ಸ್ಥಳ ಮಹಜರು, ಆರೋಪ ಪಟ್ಟಿ, ಐವಿಎಂ ವರದಿ, ಗಾಯದ ಪ್ರಮಾಣಪತ್ರ, ವಾಹನ ಚಾಲನಾ ಪರವಾನಗಿ ಹಾಗೂ ಅಸಮರ್ಥತೆಯ ಪ್ರಮಾಣಪತ್ರಗಳನ್ನು ಸಾಕ್ಷ್ಯಗಳೆಂದು ಸಲ್ಲಿಸಿರುವುದನ್ನು ಅನುಕ್ರಮವಾಗಿ ನಿಶಾನೆ ಪಿ.1ರಿಂದ ಪಿ.7 ಎಂದು ಗುರುತಿಸಲಾಗಿದೆ. ಎರಡನೇ ಪ್ರತ್ಯರ್ಜಿದಾರ – ವಿಮಾಕರ್ತನ ಪರವಾಗಿ ವಿಮಾಪಾಲಿಸಿಯನ್ನು ಹೊರತುಪಡಿಸಿ ಯಾವುದೇ ಸಾಕ್ಷ್ಯಗಳನ್ನು ಹಾಜರುಪಡಿಸಿರುವುದಿಲ್ಲ.

5. ಇಬ್ಬರು ಪಕ್ಷಕಾರರ ವಾದಗಳ ಆಧಾರದ ಮೇಲೆ, ಆಯುಕ್ತರು, 5 ವಿವಾದಾಂಶಗಳನ್ನು ರೂಪಿಸಿದ್ದಾರೆ ಮತ್ತು ಮೌಖಿಕ ಹಾಗೂ ಲಿಖಿತ ದಸ್ತಾವೇಜೀಯ ಸಾಕ್ಷ್ಯಗಳ ವಿಶ್ಲೇಷಣೆಯನ್ನಾಧರಿಸಿ, ಕೆಲಸಗಾರನಿಗೆ ಆತನು ಕಾರ್ಯನಿರ್ವಹಿಸುವ ವೇಳೆಯಲ್ಲಿ ಗಾಯಗಳುಂಟಾಗಿರುವುದರಿಂದ, ಕ್ಲೇಮು ಅರ್ಜಿಯನ್ನು ಪುರಸ್ಕರಿಸಿ, ತೀರ್ಪು ನೀಡಿದ ದಿನಾಂಕದಿಂದ 51,667/– ರೂ.ಗಳ ನಷ್ಟ ಪರಿಹಾರವನ್ನು ಶೇ.12ರ ಬಡ್ಡಿ ಸಹಿತ ನೀಡಲು ಐತೀರ್ಪು ನೀಡಿದ್ದಾರೆ. ಈ ಐತೀರ್ಪಿನ ವಿರುದ್ಧ ವಿಮಾಕರ್ತನು ಕ್ಲೇಮು ಅರ್ಜಿಯನ್ನು ಸಲ್ಲಿಸಿರುವನು.

6. ಅಪೀಲುದಾರ – ವಿಮಾಕರ್ತನ ಪರ ವಕೀಲರಾದ ಶ್ರೀಮತಿ ಅರುಣ ಆರ್. ದೇಶಪಾಂಡೆಯವರು, ನಿಶಾನೆ ಪಿ.7ರಲ್ಲಿ ಇರುವಂತೆ ಅಸಮರ್ಥತತೆ ಪ್ರಮಾಣಪತ್ರ ನೀಡಿದ ವೈದ್ಯರು, ಕೀಲು ಮತ್ತು ಮೂಳೆ ಕ್ಷೇತ್ರದ ಅರ್ಹ ವೈದ್ಯರಾಗಿಲ್ಲವೆಂದು ವಾದಿಸಿರುವರು. ಅಲ್ಲದೆ, ಕ್ಲೇಮುದಾರನಿಗೆ ಉಂಟಾದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳೆಂದು ಹಾಗೂ ಅನುಸೂಚಿತ ಪಟ್ಟಿಯಲ್ಲಿಲ್ಲದ ಗಾಯಗಳೆಂದು ಅವರು ವಾದಿಸಿದ್ದಾರೆ. ಆದುದರಿಂದ ಕ್ಲೇಮುದಾರನಿಗೆ ಶೇ.10ರಷ್ಟು ಶಾಶ್ವತ ದೈಹಿಕ / ಕಾರ್ಯಾತ್ಮಕ ಅಸಮರ್ಥತೆ ಉಂಟಾಗಿದೆ ಎಂದು ಆಯುಕ್ತರು ನಿರ್ಣಯಿಸಿರುವುದು ಸಮರ್ಥನೀಯ ವಾದುದಲ್ಲವಾದ್ದರಿಂದ ಅವರು ನೀಡಿರುವ ಪರಿಹಾರವು ಅಧಿಕವಾಗಿದೆಯೆಂದು ವಾದಿಸಿದ್ದಾರೆ. ಈ ಪ್ರಮುಖ ಕಾರಣಗಳ ಆಧಾರದ ಮೇಲೆ ಅಪೀಲುದಾರ – ವಿಮಾಕರ್ತನ ಪರ ನೀಡಿರುವ ಪ್ರಶ್ನಿತ ಐತೀರ್ಪನ್ನು ವಜಾಗೊಳಿಸಲು ಕೋರಿದ್ದಾರೆ.

7. ಮೇಲಿನ ವಾದಕ್ಕೆ ಪ್ರತಿಯಾಗಿ, ಕೆಲಸಗಾರನ ಪರ ವಕೀಲರಾದ ಮಾನ್ಯ ವೈ. ಲಕ್ಷ್ಮೀಕಾಂತ್ ರೆಡ್ಡಿಯವರು, ***ಗೊಲ್ಲ ರಾಜಣ್ಣ ಮತ್ತು ಇತರರು –ವಿರುದ್ಧ– ವಿಭಾಗೀಯ ವ್ಯವಸ್ಥಾಪಕರು ಮತ್ತು ಇನ್ನೊಬ್ಬರು*** [1] ಮೊಕದ್ದಮೆಯಲ್ಲಿ, ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿ ಈ ನ್ಯಾಯಾಲಯದ ಸಮನ್ವಯ ಪೀಠವು ಹೊರಡಿಸಿದ ದಿನಾಂಕ: 20.11.2012ರ ತೀರ್ಪಿನಿಂದ ಉದ್ಭವಿಸಿದ ಎಮ್‌ಎಫ್‌ಎ ಸಂ. 22543/2009ರಲ್ಲಿ ಮತ್ತು ಇತರ ಸಂಬಂಧಪಟ್ಟ ವಿಷಯಗಳಲ್ಲಿ ಆಯುಕ್ತರು ದಾಖಲೆಯಲ್ಲಿನ ಸಾಕ್ಷ್ಯಗಳನ್ನು ಪರಿಗಣಿಸಿ, ನಷ್ಟ ಪರಿಹಾರ ನೀಡಿರುವುದು ಸಮರ್ಥನೀಯವಾಗಿದೆಯೆಂದು ತೀವ್ರವಾಗಿ ವಾದಿಸಿದ್ದಾರೆ ಮತ್ತು ವಿಮಾಕರ್ತನು ಸಲ್ಲಿಸಿದ ಅಪೀಲನ್ನು ವಜಾಗೊಳಿಸಬೇಕೆಂದು ಕೋರಿದ್ದಾರೆ.

8. ದಾಖಲೆಯಲ್ಲಿನ ಸಾಕ್ಷ್ಯಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದ ನಂತರ, ಆಯುಕ್ತರ ಮುಂದೆ ವಿಚಾರಣೆ ನಡೆಯುತ್ತಿರುವಾಗ, ಕೆಲಸಗಾರನು ನಿಯೋಜಕ

1. (2017) 1 ಎಸ್‌ಸಿಸಿ 45

– ನಿಯೋಜಿತನ ನ್ಯಾಯಿಕ ಸಂಬಂಧವನ್ನು ಮತ್ತು ಆತನಿಗೆ ಉದ್ಯೋಗಾವಧಿಯಲ್ಲಿ ಗಾಯವಾಗಿದೆ ಎಂಬುದನ್ನು ನಿರೂಪಿಸಿರುವುದು ಕಂಡುಬರುತ್ತದೆ. ನಿಶಾನೆ ಪಿ.7 ರಲ್ಲಿರುವ ಅಸಮರ್ಥತೆ ಪ್ರಮಾಣಪತ್ರ ನೀಡಿದ ವೈದ್ಯರು ಕೀಲು–ಮೂಳೆ ವಿಷಯ ಕ್ಷೇತ್ರದಲ್ಲಿ ತಜ್ಞನಲ್ಲವಾದರೂ, ಅದನ್ನು ಕ್ಷ–ಕಿರಣ (ಎಕ್ಸ್–ರೇ) ವರದಿಯ ಆಧಾರದ ಮೇಲೆ ನೀಡಿದ್ದಾರೆ ಮತ್ತು ಅವರು ಶೇ.10ರಷ್ಟು ಶಾಶ್ವತ ದೈಹಿಕ/ಕಾರ್ಯಾತ್ಮಕ ಅಸಮರ್ಥತತೆ ಉಂಟಾಗಿದೆಯೆಂದು ನಿರ್ಧರಿಸಿದ್ದಾರೆ. ನಿಶಾನೆ. ಪಿ.6 ಶಾಸನಬದ್ಧ ಪ್ರಾಧಿಕಾರವು ಕೆಲಸಗಾರನಿಗೆ ನೀಡಿದ ವಾಹನ ಚಾಲನಾ ಪರವಾನಗಿ ಪರಿಶೀಲನೆಯಿಂದ ತಿಳಿದುಬಂದಂತೆ ಅಪಘಾತದ ದಿನಾಂಕದಂದು ಕೆಲಸಗಾರನಿಗೆ 26 ವರ್ಷ ವಯಸ್ಸಾಗಿತ್ತು ಹಾಗೂ ಅಪಘಾತವಾದ ವರ್ಷ 2005 ಆಗಿದೆ ಮತ್ತು ಆಯುಕ್ತರು ಆತನ ಮಾಸಿಕ ಸಂಬಳವನ್ನು 4000/– ರೂ.ಗಳು ಎಂಬುದಾಗಿ ತೆಗೆದುಕೊಂಡಿದ್ದು, 215.28ರ ಸುಸಂಬದ್ಧ ಗುಣಾಂಕವನ್ನು ಅನ್ವಯಿಸಿ, ಆಯುಕ್ತರು 51,667/– ರೂ.ಗಳ ಸೂಕ್ತವಾದ ನಷ್ಟ ಪರಿಹಾರವನ್ನು ನಿರ್ಧರಿಸಿದ್ದಾರೆ.

9. ಮೇಲೆ ಉಲ್ಲೇಖಿಸಿದ ***ಗೊಲ್ಲ ರಾಜಣ್ಣ*** ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯವನ್ನು ಈ ಕೆಳಕಂಡಂತೆ ಓದಲಾಗಿದೆ:

> *"9. ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ಸಾಕ್ಷ್ಯಗಳನ್ನು ಗಮನದಲ್ಲಿರಿಸಿಕೊಂಡು ಗಾಯದ ಸ್ವರೂಪ ಮತ್ತು ಅಮರ್ಥತತೆಯ ಶೇಕಡಾವಾರು ಪ್ರಮಾಣದ ಆಧಾರದ ಮೇಲೆ ನಿರ್ಣಯವನ್ನು ನೀಡಿದ್ದಾರೆ. ಇದು ಪೂರ್ತಿಯಾಗಿ ಸಂಗತಿಗೆ ಸಂಬಂಧಿಸಿದ ಪ್ರಶ್ನೆಯಾಗಿದೆ. ನಿರ್ಣಯವು ಸಾಕ್ಷ್ಯವನ್ನಾಧರಿಸಿಲ್ಲ ಅಥವಾ ಅದು ವ್ಯತಿರಿಕ್ತವಾದುದಾಗಿದೆ ಎಂಬುದು ವಿಮಾ ಕಂಪನಿಯು ಮೊಕದ್ದಮೆಯಲ್ಲ. ಅಧಿನಿಯಮದ 4(1)(ಸಿ)(ii) ಪ್ರಕರಣಗಳ ಮೇರೆಗೆ ಶಾಶ್ವತ ಅಸಮರ್ಥತೆಯ ಶೇಕಡಾವಾರು ಪ್ರಮಾಣವನ್ನು ಅರ್ಹ ವೈದ್ಯಾಧಿಕಾರಿ ಮಾತ್ರವೇ ನಿರ್ಧರಿಸಬೇಕಾಗುತ್ತದೆ.*

*ಅಧಿನಿಯಮದ ಅಡಿಯಲ್ಲಿ ಪರಿಭಾಷಿಸಿದಂತೆ ಅಸಮರ್ಥತೆ ಪ್ರಮಾಣಪತ್ರ ನೀಡಿದ ವೈದ್ಯನು ಅರ್ಹ ವೈದ್ಯಾಧಿಕಾರಿಯಲ್ಲ ಎಂಬುದು ಪ್ರತ್ಯರ್ಜಿದಾರರ ಮೊಕದ್ದಮೆಯಾಗಿಲ್ಲ. ಹಾಗಾಗಿ, ಕಾರ್ಮಿಕ ನಷ್ಟಪರಿಹಾರ ಆಯುಕ್ತರು, ವೈದ್ಯರು ನೀಡಿರುವ ಅಸಮರ್ಥತೆಯ ಪ್ರಮಾಣಪತ್ರದ ಆಧಾರದ ಮೇಲೆ ತೀರ್ಪನ್ನು ಹೊರಡಿಸಿದ್ದಾರೆ ಮತ್ತು ಅದನ್ನು ಕಾರ್ಮಿಕ ನಷ್ಟಪರಿಹಾರ ಆಯುಕ್ತರ ಮುಂದೆ ಯುಕ್ತವಾಗಿ ರುಜುವಾತುಪಡಿಸಲಾಗಿದೆ.*

*10. ಅಧಿನಿಯಮದ ಸೂಚನೆಯ ಮೇರೆಗೆ, ಕಾರ್ಮಿಕ ನಷ್ಟಪರಿಹಾರ ಆಯುಕ್ತರು, ಸಂಗತಿಗಳನ್ನು ಕುರಿತಂತೆ ಅಂತಿಮ ಪ್ರಾಧಿಕಾರಿಯಾಗಿರುವರು. ಹಿತರಕ್ಷಣಾ ಶಾಸನವಾಗಿ, ಕಾನೂನಿನ ಪ್ರಮುಖ ಪ್ರಶ್ನೆಗಳಿಗೆ ಮಾತ್ರ ಅಪೀಲಿನ ವ್ಯಾಪ್ತಿಯನ್ನು ಸೂಕ್ತವೆಂದು ಸಂಸತ್ತು ಚಿಂತಿಸಿದೆ. ದುರದೃಷ್ಟವಶಾತ್, ಉಚ್ಚ ನ್ಯಾಯಾಲಯವು, ಪರಿಮಿತ ಅಧಿಕಾರ ವ್ಯಾಪ್ತಿಯ ಈ ನಿರ್ಣಾಯಕ ಪ್ರಶ್ನೆಯನ್ನೇ ಕೈಬಿಟ್ಟಿದೆ ಮತ್ತು ಗುಣಾರ್ಹತೆಗಳನ್ನು ವಿವೇಚಿಸುವ ಪ್ರಯತ್ನ ಮಾಡಿದೆ ಹಾಗೂ ಶೇಕಡಾವಾರು ಪ್ರಮಾಣದ ಆಧಾರದ ಮೇಲೆ ತನ್ನದೇ ಆದ ನಿರ್ಣಯಗಳಲ್ಲಿ ದಾಖಲಿಸಿದ್ದು, ಇದಕ್ಕೆ ಯಾವುದೇ ಆಧಾರವಿಲ್ಲ. ಉಚ್ಚ ನ್ಯಾಯಾಲಯವು ತೆಗೆದುಕೊಂಡ ಈ ಎಲ್ಲ ಪ್ರಯತ್ನಗಳು ಅಧಿನಿಯಮದ 30ನೇ ಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯದ ವಿಚಾರಣಾಧಿಕಾರದ ವ್ಯಾಪ್ತಿಯೊಳಗೆ ಬರುವುದಿಲ್ಲ".*

10. ಮೇಲೆ ನಡೆಸಿದ ಚರ್ಚೆ ಹಾಗೂ ಮೇಲೆ ಉಲ್ಲೇಖಿಸಿದ ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಮೂದಿಸಿದ ಅಭಿಪ್ರಾಯದ ಹಿನ್ನೆಲೆಯಲ್ಲಿ, ಅಪೀಲುದಾರರ ಪರ ಮಾನ್ಯ ವಕೀಲರು ಮಂಡಿಸಿದ ವಾದದಲ್ಲಿ ಯಾವುದೇ ತಿರುಳಿಲ್ಲ. ಮಾನ್ಯ ಆಯುಕ್ತರು ಸೂಕ್ತ ಕಾರಣಗಳೊಂದಿಗೆ ಹೊರಡಿಸಿದ ಆದೇಶದಲ್ಲಿ

ಹಸ್ತಕ್ಷೇಪ ಮಾಡಲು ಯಾವುದೇ ನ್ಯಾಯಸಮ್ಮತವಾದ ಕಾರಣಗಳಿಲ್ಲ. ಪರಿಣಾಮವಾಗಿ, ಅಪೀಲು ವಜಾಗೊಳ್ಳಲು ಸೂಕ್ತವಾಗಿದೆ. ಆ ಕಾರಣದಿಂದ ಅಪೀಲಿಗೆ ಯಾವುದೇ ಗುಣಾರ್ಹತೆ ಇಲ್ಲ.

ತದನುಸಾರವಾಗಿ ಅಪೀಲನ್ನು ವಜಾಗೊಳಿಸಲಾಗಿದೆ.